**CC 5125/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 5125/2023**

**ಸಿ ಡಬ್ಲ್ಯೂ - 2**

**ಪಿ ಡಬ್ಲ್ಯೂ - 2**

**ಸಾಕ್ಷಿಯ ಹೆಸರು -** **ತಿರುಮಲೇಶ**
**ತಂದೆಯ ಹೆಸರು -** **ನಿಲಗಿರಿಯಪ್ಪ**
**ವಯಸ್ಸು -** **59 ವರ್ಷಗಳು**
**ಉದ್ಯೋಗ -** **ಪ್ರಾಚ್ಯ ವಸ್ತು ಇಲಾಖೆ, ಕಮಲಾಪುರ**
**ವಾಸಸ್ಥಳ -** **ಕಮಲಾಪುರ**

**ಸಾಕ್ಷಿಯನ್ನು ದಿನಾಂಕಃ 10-01-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಚಾಸಾ **-1, 3** ರವರ ಪರಿಚಯ ಇರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿರುತ್ತೇನೆ.

ಈಗ ನಾನು ನೋಡುತ್ತಿರುವ ಪಂಚನಾಮೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿಃ **2** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ **2 (ಬಿ)** ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿಃ **4** ರ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

ದಿಃ **24-06-2023** ರಂದು ನಾನು ಮನೆಯಲ್ಲಿದ್ದಾಗ ನಮ್ಮ ಇಲಾಖೆಯ ಮೇಲಾಧಿಕಾರಿಗಳು ನನಗೆ ಕರೆ ಮಾಡಿ ಹಂಪಿ ಪೋಲಿಸ ಠಾಣೆಗೆ ಹೋಗುವಂತೆ ತಿಳಿಸಿದ್ದರು. ನಾನು ಬೆಳಿಗ್ಗೆ **08-00** ಗಂಟೆಗೆ ಹಂಪಿ ಪೋಲಿಸ ಠಾಣೆಗೆ ಹೋಗಿರುತ್ತೇನೆ. ಚಾಸಾ **-1** ರವರು ಠಾಣೆಯಿಂದ ಜೀಪ್ ನಲ್ಲಿ ನನ್ನನ್ನು ಕಡ್ಡಿರಾಂಪೂರದ ಉದ್ದಾನಪ್ಪನ ತೋಟದ ಬಳಿ ಕರೆದುಕೊಂಡು ಹೋಗಿರುತ್ತಾರೆ. ನಾನು ಮತ್ತು ಪೋಲಿಸರು ಸದರಿ ತೋಟದ ಬಳಿ ನಿಂತು ನೋಡಿದಾಗ ಅಲ್ಲಿ ಇಬ್ಬರು ಹುಡುಗರು ಇದ್ದದ್ದು ಕಂಡು ಬಂದಿತ್ತು.

ಪೋಲಿಸರು ಹೋಗಿ ಸದರಿ ಹುಡುಗರನ್ನು ಹಿಡಿದರು. ಸದರಿ ಹುಡುಗರ ಬಳಿ ಗಾಂಜಾ ಇರುತ್ತದೆ ಎಂದು ನಮಗೆ ತಿಳಿಸಿದರು. ಸದರಿ ಗಾಂಜಾವನ್ನು ತೂಕ ಮಾಡಬೇಕು ಎಂದು ಒಬ್ಬ ವ್ಯಕ್ತಿಯನ್ನು ಕರೆಸಿದ್ದರು. ಪ್ಲಾಸ್ಟಿಕ್ ಚೀಲದಲ್ಲಿದ್ದ ಗಾಂಜಾ ತೂಕ ಮಾಡಿ ನೋಡಿದಾಗ 220 ಗ್ರಾಂ ಇತ್ತು. ಪ್ಲಾಸ್ಟಿಕ್ ತೆಗೆದು ನೋಡಿದಾಗ 200 ಗ್ರಾಂ ಇತ್ತು. ಸದರಿ ಗಾಂಜಾವನ್ನು ಚಾಸಾ -1 ರವರು ನಮ್ಮ ಸಮಕ್ಷಮ ಜಪ್ತು ಪಡಿಸಿಕೊಂಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು ಮಾ ದಲ್ಲಿನ ಗಾಂಜಾವನ್ನು ನನ್ನ ಸಮಕ್ಷಮ ಜಪ್ತು ಪಡಿಸಿಕೊಂಡಿರುತ್ತಾರೆ. ಸಾಕ್ಷಿ ಮು ಮಾ 1 ನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಾವು ಹೋಗಿದ್ದ ತೋಟದ ಕಚ್ಚಾ ರಸ್ತೆಯ ಮೇಲೆ ಮಾಡಿರುತ್ತಾರೆ. ಪಂಚನಾಮೆಯನ್ನು ಬೆಳಿಗ್ಗೆ 08-45 ರಿಂದ ಮಾಡಿರುತ್ತಾರೆ. ಸ್ಥಳದಲ್ಲಿ ಪೋಲಿಸರು, ಶರಣಪ್ಪ ಮತ್ತು ಬಸವರಾಜ ರವರು ಇದ್ದರು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ ಎಲ್ ಎಸ್ ಕೆ., ವಕೀಲರಿಂದ**

ನಾನು 3 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ಪ್ರಾಚ್ಯ ವಸ್ತು ಇಲಾಖೆಯ ಖಾಯಂ ನೌಕರನಿರುತ್ತೇನೆ. ನಾನು 1998 ರಿಂದ ಕೆಲಸ ಮಾಡುತ್ತಿದ್ದೇನೆ. ನಾನು ಕಮಲಾಪುರದ ಖಾಯಂ ನಿವಾಸಿ. ನನ್ನ ಮೇಲಾಧಿಕಾರಿ ಪಂಚನಾಮೆಗೆ ಹೋಗುವಂತೆ ಲಿಖಿತ ರೂಪದಲ್ಲಿ ನನಗೆ ಆದೇಶವನ್ನು ಮಾಡಿರುವುದಿಲ್ಲ. ಪೋಲಿಸರು ನಮ್ಮ ಮೇಲಾಧಿಕಾರಿಗೆ ಸಿಬ್ಬಂದಿಗಳನ್ನು ಪಂಚರಾಗಿ ಕಳುಹಿಸುವಂತೆ ನೀಡಿದ ಕೋರಿಕೆ ಪತ್ರವನ್ನು ನಾನು ನೋಡಿಲ್ಲ. ಲಿಖಿತ ರೂಪದಲ್ಲಿ ಆದೇಶ ಆಗದಿದ್ದರೆ ನಾವು ಹೋಗುವ ಆಗಿಲ್ಲ ಎಂದು ನನಗೆ ಗೊತ್ತು ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಅಧಿಕಾರಿ ಯಾವ ರೀತಿ ಆದೇಶಿಸಿದರೂ ನಾನು ಕೇಳುತ್ತೇನೆ ಎಂದು ನುಡಿಯುತ್ತಾರೆ.

ನನ್ನ ಕೆಲಸದ ವೇಳೆ ಬೆಳಿಗ್ಗೆ 08-30 ರಿಂದ ಸಂಜೆ 05-00 ಗಂಟೆ ಇರುತ್ತದೆ. ನಮ್ಮ ಕಚೇರಿಯಲ್ಲಿ ಲಾಗ್ ಬುಕ್ ಇಡಲಾಗಿದೆ ಅಂದರೆ ಸರಿ. ಸದರಿ ಬುಕ್ ನಲ್ಲಿ ನಾವುಗಳು ಬಂದದ್ದು ಮತ್ತು ಹೋಗಿದ್ದು ಬರೆಯಲಾಗುತ್ತದೆ ಅಂದರೆ ಸರಿ. ಸದರಿ ಲಾಗ್ ಬುಕ್ ನಲ್ಲಿ ಮೇಲಾಧಿಕಾರಿ ಪಂಚನಾಮೆ ಮಾಡಲು ಪೋಲಿಸ ಠಾಣೆಗೆ ಕಳುಹಿಸಿಕೊಡುತ್ತಿದ್ದಾರೆ ಎಂದು ಬರೆದು ಅದಕ್ಕೆ ಸಹಿ ಮಾಡಿಲ್ಲ ಅಂದರೆ ಸರಿ.

ಪಂಚನಾಮೆ ಆದ ನಂತರ ನಾನು ನನ್ನ ಕೆಲಸ ಮಾಡಲು ಕಚೇರಿಗೆ ಹೋಗಿರುತ್ತೇನೆ. ನಾನು ಕಚೇರಿಗೆ ಹಿಂತಿರುಗಿದ ನಂತರ ಆ ಲಾಗ್ ಪುಸ್ತಕದಲ್ಲಿ ಪಂಚನಾಮೆ ಕಾರ್ಯ ಮುಗಿಸಿಕೊಂಡು ಬಂದಿರುತ್ತೇನೆ ಎಂದು ಬರೆದು ಅದಕ್ಕೆ ಸಹಿ ಮಾಡಿಲ್ಲ ಅಂದರೆ ಸರಿ. ನಾನು ಕೂಲಿ ಕಾರ್ಮಿಕರು ನಮ್ಮ ಪ್ರಾಚ್ಯ ವಸ್ತು ಇಲಾಖೆಗೆ ಸಂಬಂಧಿಸಿದ ಸ್ಥಳಗಳಲ್ಲಿ ಕೆಲಸ ಮಾಡುವುದನ್ನು ಮೇಲ್ವಿಚಾರಣೆ ಮಾಡುತ್ತೇನೆ. ನಾನು ಇದಕ್ಕೂ ಮೊದಲು ಆರೋಪಿತರನ್ನು ಎಲ್ಲಿಯೂ ನೋಡಿರಲಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಂಚನಾಮೆ ಮಾಡಿದ ಸ್ಥಳದಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿತರನ್ನು ನೋಡಿ ಅವರ ಹೆಸರು ಇದೆ ಎಂದು ಖಚಿತವಾಗಿ ಹೇಳಲು ಆಗುವುದಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ಅವರುಗಳ ಹೆಸರು ಗೌತಮ್ ಮತ್ತು ಮಂಜು ಎಂದು ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ನನ್ನನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರೂ ಎನ್ನಲಾದ ಜೀಪ್ ನ ನೋಂದಣಿ ಸಂಖ್ಯೆ ನನಗೆ ಗೊತ್ತಿಲ್ಲ. ಜೀಪ್ ನಲ್ಲಿ ನಾವು 3 ಜನ ಸ್ಥಳಕ್ಕೆ ಹೋಗಿದ್ದೇವು. ಜೀಪ್ ನಲ್ಲಿದ್ದ ಚಾಸಾ -1 ರವರ ಹೆಸರು ಮಾತ್ರ ನನಗೆ ಗೊತುತ. ಇನ್ನೊಬ್ಬ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ.

ಉದ್ದಾನಪ್ಪನ ಜಮೀನಿನ ಮತ್ತು ಅದರ ಪಕ್ಕದ ಬಾಳೆ ತೋಟದ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸದರಿ ಜಮೀನುಗಳ ಚೆಕ್ ಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ ಅಂದರೆ ಸರಿ. ಗುನ್ನಾ ಸ್ಥಳದ ಹತ್ತಿರ ಟಾರ್ ರಸ್ತೆ ಇರುತ್ತದೆ ಅಂದರೆ ಸರಿ. ನಾನು ಹೇಳಿದ ಬೆಳಗಿನ ಸಮಯದಲ್ಲಿ ಸದರಿ ಟಾರ್ ರಸ್ತೆಯಿಂದ ಕಚ್ಚಾ ರಸ್ತೆಯ ಮೇಲೆ ಸಾಕಷ್ಟು ರೈತರು ಮತ್ತು ಊರಿನ ಜನರು ಓಡಾಡುತ್ತಾರೆ ಅಂದರೆ ಸರಿ.  ಮೋಟಾರ್ ಸೈಕಲ್ ಗಳಲ್ಲಿ ಬಂದಿದ್ದ ಪೋಲಿಸರ ಜೇಬುಗಳಲ್ಲಿ ಏನೇನು ಇದ್ದವು ಎಂದು ನಾನು ನೋಡಿರುವುದಿಲ್ಲ. ಮು ಮಾ 1 ರಲ್ಲಿರುವ ಬಿಳಿ ಬಟ್ಟೆ ಮತ್ತು ಅಂಟು ಪಟ್ಟಿಯನ್ನು ಗುನ್ನಾ ಸ್ಥಳಕ್ಕೆ ಯಾರು ತಂದಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಬಿಳಿ ಬಟ್ಟೆಯಲ್ಲಿ ಮಾದರಿಯನ್ನು ಹಾಕಿ ಯಾರು ಸೀಲು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ಮು ಮಾ 1 ರ ಮೇಲಿರುವ ಬರಹಗಳು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ಮು ಮಾ ನ ಮೇಲೆ ಪೋಲಿಸ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಅಂದರೆ ಸರಿ.

ಈಗ ನಾನು ನೋಡುತ್ತಿರುವ ಅಂತಿಮ ವರದಿಯಲ್ಲಿನ ನೋಟಿಸ್ ನಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ನೋಟಿಸ್ ವೊಂದರಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ನೋಟಿಸ್ ನಿಡಿಃ **1** ಎಂದು**,** ಸಾಕ್ಷಿಯ ಸಹಿಯನ್ನು ನಿಡಿಃ **1 (ಎ)** ಎಂದು ಗುರುತಿಸಲಾಯಿತು**.** ಸದರಿ ನೋಟಿಸ್ ನಲ್ಲಿ ದಿಃ **26-03-2023** ರಂದುನ ಅಕ್ರಮ ಗಾಂಜಾ ಸಾಗಾಣಿಕೆ ಮಾಡುವವರ ಮೇಲೆ ದಾಳಿ ಮಾಡಬೇಕಾಗಿದೆ ಎಂದು ಬರೆಯಲಾಗಿದೆ ಅಂದರೆ ಸರಿ**.**

ಪಂಚನಾಮೆಯನ್ನು ಯಾರು ಮತ್ತು ಎಲ್ಲಿ ಟೈಪ್ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ**.** ಪಂಚನಾಮೆಗೆ ನಾನು ಗುನ್ನಾ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ**.** ಸ್ಥಳದಲ್ಲಿ ನನ್ನ ಒಂದು ಸಹಿಯನ್ನು ಪಡೆದಿರುತ್ತಾರೆ**.**

**CC 5125/2023**

**ಸಿ ಡಬ್ಲೂ - 2**

**ಪಿ ಡಬ್ಲೂ - 2**

ಪಂಚನಾಮೆಗೆ ನಾನು ಸಹಿ ಮಾಡುವುದಕ್ಕೂ ಮೊದಲೇ ಅದು ತಯಾರಾಗಿತ್ತಾ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಹಾಳೆಯ ಮೇಲೆ ಮಾತ್ರ ಸಹಿ ಮಾಡಿದ್ದೆ ಎಂದು ನುಡಿಯುತ್ತಾರೆ.

ನನ್ನ ಮೇಲಾಧಿಕಾರಿಗಳು ಲಿಖಿತ ರೂಪದಲ್ಲಿ ಆದೇಶ ಮಾಡದೇ ನಾನು ಕೆಲಸ ಮಾಡುವ ಸ್ಥಳವನ್ನು ಬಿಟ್ಟು ಹೋಗಲು ಬರುವುದಿಲ್ಲ ಅಂದರೆ ಸರಿ. ಆ ದಿನ ನಾನು ಸದರಿ ಸ್ಥಳಕ್ಕೆ ಹೋಗಿಲ್ಲ, ನನ್ನ ಸಮಕ್ಷಮ ಯಾವುದೇ ದಾಳಿ ಕಾರ್ಯ ನಡೆದಿಲ್ಲ, ಆರೋಪಿತರನ್ನು ಸ್ಥಳದಲ್ಲಿ ನಾನು ನೋಡಿಲ್ಲ ಮತ್ತು ಪೋಲಸಿರು ಅವರನ್ನು ಹಿಡಿದಿರಲಿಲ್ಲ ಅಂದರೆ ಸರಿಯಲ್ಲ. ಆರೋಪಿತರ ಕಡೆಯಿಂದ ಪೋಲಿಸರು ಯಾವುದೇ ಗಾಂಜಾವನ್ನು ಜಪ್ತು ಪಡಿಸಿಕೊಂಡಿಲ್ಲ ಮತ್ತು ನಮ್ಮ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿಲ್ಲ ಅಂದರೆ ಸರಿಯಲ್ಲ. ನಾನು ದಿಃ **24-06-2023** ರಂದು ಪೋಲಿಸರಿಂದ ಯಾವುದೇ ನೋಟಿಸ್ ನ್ನು ಪಡೆದಿಲ್ಲ ಅಂದರೆ ಸರಿಯಲ್ಲ. ಪ್ರಕರಣದ ಅಂಶಗಳೆಲ್ಲಾ ಸುಳ್ಳು ಎಂದು ಗೊತ್ತಿದ್ದರೂ ಸಹ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.